ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1251/2021

ಚಾಸಾ:4 ಪ್ರಾಸಾ:4

ದಿನಾಂಕ: 24.06.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮೋಹನ |
| ತಂದೆಯ ಹೆಸರು | : | ಬಸವ ನಾಯ್ಕ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಮೂಡುಗೋಪಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸಾಕ್ಷಿ ನಿಪಿ-3 ರಿಂದ 5 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-3(ಬಿ) ರಿಂದ ನಿಪಿ-5(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ದಿ: 19-02-2021 ರಂದು ಪ್ರೀತಂ ಬಾರ್ ಬಳಿ ಪಂಚನಾಮೆ ಜರುಗಿಸುವ ವೇಳೆಗೆ ನಾನು ಮತ್ತು ಚಾಸಾ-3 ರವರು ಹಾಜರು ಇದ್ದು, ಸದ್ರಿ ಕ್ರಮವನ್ನು ಸಂಜೆ 4-30 ರಿಂದ 5-30ರವರೆಗೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಸ್ಥಳದಲ್ಲಿ ರಕ್ತದ ಕಲೆ ಮತ್ತು ಹೆಲ್ಮೇಟ್ ಇತ್ತು. ಬೈಕನ್ನು ಠಾಣೆಯ ಬಳಿ ವಶಕ್ಕೆ ಪಡೆಯುವ ವೇಳೆಗೆ ಮತ್ತೊಂದು ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿ ನಿಪಿ-6 ರಿಂದ 9ನ್ನು ನೋಡಿ ಗುರುತಿಸಿರುತ್ತಾರೆ.

ದಿ: 18-02-2021 ರಂದು ರಾತ್ರಿ 9-30 ಗಂಟೆಗೆ ಪ್ರೀತಂ ಬಾರ್ ಬಳಿ ಅಪಘಾತವಾಗಿರುವುದಾಗಿ ಕರೆ ಬಂದಿರುತ್ತದೆ. ನಾನು ಸ್ಥಳಕ್ಕೆ ತಲುಪುವ ವೇಳೆಗೆ ಮೃತರ ದೇಹವನ್ನು ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಸ್ಥಳಾಂತರಿಸಿದ್ದು, ಬಸ್ಸು ಡಿಕ್ಕಿ ಪಡಿಸಿದ ಪರಿಣಾಮ ನನ್ನ ಅಣ್ಣ ಪ್ರವೀಣ್ ಮೃತಪಟ್ಟಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ನಾನು ಸ್ಥಳಕ್ಕೆ ಹೋದಾಗ ಬಸ್ಸು ಹಾಗೂ ಬೈಕು ಸ್ಥಳದಲ್ಲಿ ಇತ್ತು. ಈ ಕುರಿತಾಗಿ ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ಸದ್ರಿ ದಿನ ಬಸ್ಸಿನ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ನಾನು ಕೆ ಎಸ್ ಆರ್ ಟಿ ಸಿ ಬಸ್ಸಿ ನ ಚಾಲಕನಾಗಿರುತ್ತೇನೆ. ದಿಃ 18-02-2021 ಹಾಗೂ ದಿಃ 19-02-2021 ರಂದು ನನ್ನ ಮಗನ ಹುಟ್ಟಿದ ಹಬ್ಬ ಇದ್ದ ಕಾರಣ ರಜೆ ಪಡೆದಿದ್ದೆ. ಅಪಘಾತದ ಬಗ್ಗೆ ಮಾಹಿತಿಯನ್ನು ನನ್ನ ಸ್ನೇಹಿತರಾದ ಸುಧೀರ್ ರವರು 9-30ಕ್ಕೆ ಕರೆ ಮಾಡಿರುತ್ತಾರೆ. ಆಗ ನಾನು ಬೀಜಾಡಿಯ ಬೈಪಾಸ್ ನಲ್ಲಿ ಇದ್ದೆ. ನಾನು ಕೂಡಲೇ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಹೋಗುವ ವೇಳೆಗೆ ಕರೆ ಮಾಡಿದ ವ್ಯಕ್ತಿ ಇರಲಿಲ್ಲ. ಆಗ ಸ್ಥಳೀಯರು ಸೇರಿದ್ದರು. ಸಾರ್ವಜನಿಕರು ಮೃತರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ವಿಚಾರ ತಿಳಿಸಿರುತ್ತಾರೆ.

ಅಪಘಾತವಾದ ದಿನದಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದನ್ನು ನಾನು ಗಮನಿಸಿಲ್ಲ. ನಾನು ಸ್ಥಳಕ್ಕೆ ಹೋದಾಗ ಬಸ್ಸು ರಸ್ತೆಯ ಮಧ್ಯದಲ್ಲಿ ಇತ್ತು, ಬೈಕು ಸೈಡ್ ನಲ್ಲಿ ಇತ್ತು. ನಾನು 9-45 ಕ್ಕೆ ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿ ರಸ್ತೆ ಸಂಚಾರ ಸ್ಥಗಿತಗೊಂಡಿರಲಿಲ್ಲ. ವಾಹನಗಳು ಸ್ವಲ್ಪ ಮುಂದಕ್ಕೆ ಹೋಗುತ್ತಿದ್ದವು. ವಾಹನ ಮಣ್ಣು ರಸ್ತೆಯಲ್ಲಿ ಬಿದ್ದಿತ್ತು. ರಸ್ತೆಯಲ್ಲಿ ರಕ್ತದ ಕಲೆ ಇತ್ತು. ಮರುದಿನ ಪೊಲೀಸರು ಸ್ಥಳಕ್ಕೆ ಬರಲು ಸೂಚಿಸಿರುತ್ತಾರೆ. ನಾನು ಬರುವ ವೇಳೆಗೆ ಪೊಲೀಸರು ಹಾಜರು ಇದ್ದು, ನಾನು ಹೋದ ನಂತರ ಬರವಣಿಗೆ ಮಾಡಿರುತ್ತಾರೆ.

ನಾನು ಅಪಘಾತದ ಪ್ರತ್ಯಕ್ಷದರ್ಶಿ ಅಲ್ಲ. ಅಪಘಾತದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಹಿಂದಿನ ದಿನ ರಕ್ತದ ಕಲೆ ಇದ್ದ ಕಾರಣ ಅದೇ ಅಪಘಾತದ ಸ್ಥಳ ಎಂದು ತೋರಿಸಿರುತ್ತೇನೆ. ಸದ್ರಿ ಬಸ್ಸನ್ನು ಬೆಳ್ಳಗೆ ಆರೋಪಿ ಚಲಾಯಿಸುತ್ತಿದ್ದನ್ನು ನಾನು ದಾರಿಯಲ್ಲಿ ಹೋಗುತ್ತಿರುವಾಗ ನೋಡಿರುತ್ತೇನೆ. ಆರೋಪಿಯೇ ಬಸ್ಸು ಚಲಾಯಿಸುತ್ತಿದ್ದ ಎಂದು ಬೇರೆಯವರು ನನಗೆ ಹೇಳಿಲ್ಲ. ಆದ್ದರಿಂದ ಅಪಘಾತವಾದ ಸಮಯದಲ್ಲಿ ವಾಹನದ ಚಾಲಕ ಯಾರಾಗಿದ್ದರು ಎಂದು ನನಗೆ ತಿಳಿದಿಲ್ಲ.

ದಿಃ 18-02-2021 ರಂದು ನಾನು ಮನೆಯಲ್ಲಿ ಇದ್ದಾಗ ಕರೆ ಬಂತು ಎಂದು ಪೊಲೀಸರು ಬರೆದಿರುವ ವಿಚಾರ ತಪ್ಪಾಗಿರುತ್ತದೆ. ನನ್ನ ಹೇಳಿಕೆಯನ್ನು ಪಂಚನಾಮೆ ಜರುಗಿಸುವ ವೇಳೆಗೆ ಪೊಲೀಸರು ಕೈಬರಹದಲ್ಲಿ ಬರೆದುಕೊಂಡಿರುತ್ತಾರೆ ಅದನ್ನು ನೋಡಿ ಸಹಿ ಮಾಡಿರುತ್ತೇನೆ. ಆಗ ಎ ಪಿ ಎಂ ಬಸ್ಸಿನ ಚಾಲಕ ಬೆಳಗ್ಗೆ ಬಸ್ಸನ್ನು ಚಲಾಯಿಸುತ್ತಿರುವ ವಿಚಾರ ನಾನು ನೋಡಿರುವುದಾಗಿ ಪೊಲೀಸರಿಗೆ ಹೇಳಿಲ್ಲ. ಪೊಲೀಸರಿಗೆ ನನ್ನ ಅಣ್ಣನ ಬೈಕಿನ ನಂಬರ್ ನ್ನು ಹೇಳಿರುತ್ತೇನೆ. ಹೆಲ್ಮೆಟ್ ರಸ್ತೆಯ ಎಡಬದಿಯಲ್ಲಿ ಪ್ರೀತಂ ಬಾರ್ ಬಳಿ ಇತ್ತು. ಅದನ್ನು ನನ್ನ ಸಮಕ್ಷಮ ವಶಕ್ಕೆ ಪಡೆದಿಲ್ಲ.

ನಾನು ಪೊಲೀಸ್ ಠಾಣೆಗೆ ಈ ಪ್ರಕರಣದ ಸಂಬಂಧ ಹೋಗಿಲ್ಲ. ನಾನು ಒಟ್ಟು 3 ಸಹಿಗಳನ್ನು ಮಾಡಿರುತ್ತೇನೆ. ಸಹಿ ಮಾಡಿದ ದಾಖಲೆಗಳಲ್ಲಿ ಪೊಲೀಸರು ಏನೆಲ್ಲಾ ಬರೆದುಕೊಂಡಿದ್ದಾರೆ ಎಂದು ಈಗ

ಹೇಳಲಾಗುವುದಿಲ್ಲ. ಪೊಲೀಸರು ಬರುವ ವೇಳೆಗೆ ಬಸ್ಸು ಸ್ಥಳದಲ್ಲಿ ಇರಲಿಲ್ಲ. ಪೋಟೋದಲ್ಲಿ ರಕ್ತದ ಕಲೆ ಇದ್ದ ಬಗ್ಗೆ ಕಂಡು ಬರುವುದಿಲ್ಲ. ಮೇಲೆ ಗುರುತಿಸಿದ ಸಹಿಗಳನ್ನು ಎಲ್ಲಿ ಮಾಡಿರುತ್ತೇನೆ ಎಂದು 4 ವರ್ಷವಾದ ಕಾರಣ ನಿಖರವಾಗಿ ಹೇಳಲಾಗುವುದಿಲ್ಲ.

ತಡರಾತ್ರಿಯಲ್ಲಿ ಅಪಘಾತವಾಗಿದ್ದ ಕಾರಣ ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ನೀಡಿ ಯಾವುದೇ ಪಂಚನಾಮೆ ಜರುಗಿಸಿಲ್ಲ, ನಕ್ಷೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಸದ್ರಿ ದಿನ ಬಸ್ಸಿನ ಚಾಲಕನಾಗಿದ್ದೆ ಎಂದು ಬೆಳಗ್ಗಿನ ವೇಳೆಯಲ್ಲಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರವೀಣರವರು ಮೃತಪಟ್ಟ ಬಗ್ಗೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಅದಕ್ಕೆ ಅನುಗುಣವಾಗಿ ಯಾವುದೇ ವಿಚಾರ ತಿಳಿದಿಲ್ಲವಾದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿ ಯಾವುದೇ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**